ಮಕ್ಕಳ ಕಥೆಗಳಲ್ಲಿ ಮಕ್ಕಳ ಧ್ವನಿ

ಜ್ಯೋತಿ ದೇಶಮುಖ್ ಮತ್ತು ಶಿವಾನಿ ತನೇಜಾ

ಶಾಲೆಯು ಮಕ್ಕಳ ಹಿತವನ್ನು ಕಾಯುವ ಒಂದು ಸಂಸ್ಥೆ ಎಂದು ನಾವು ನಂಬಿದರೂ ಕೂಡ ಶಾಲೆಗಳಲ್ಲಿನ ಮತ್ತು ಶಾಲೆಗಳ ಬಗೆಗಿನ ಎಲ್ಲಾ ನಿರ್ಧಾರಗಳನ್ನು ವಯಸ್ಕರೇ ತೆಗೆದುಕೊಳ್ಳುತ್ತಾರೆ. ಅನೇಕ ಬಾರಿ, ಮಕ್ಕಳ ವಾಸ್ತವತೆಯನ್ನು ತಿಳಿಯದ ವಯಸ್ಕರು ಶಾಲೆಯು ಕಾರ್ಯನಿರ್ವಹಿಸುವ ರೀತಿಗೆ ಜವಾಬ್ದಾರ–ರಾಗಿರುತ್ತಾರೆ. ಮಕ್ಕಳಿಗಿಂತ ವಯಸ್ಕರಿಗೆ ಹೆಚ್ಚು ತಿಳಿದಿದೆ ಎಂಬ ಈ ನಂಬಿಕೆಯನ್ನು ಪರಿಶೀಲನೆಗೆ ಒಳಪಡಿಸಬೇಕಾಗಿದೆ. ಈ ಲೇಖನವು ಮಕ್ಕಳು ತಮ್ಮ ಶಾಲಾ ಜೀವನದ ವ್ಯಾಖ್ಯಾನಗಳನ್ನು ಕಥಾಪುಸ್ತಕಗಳ ಮೂಲಕ ಹಂಚಿಕೊಳ್ಳುವಂತೆ ಅವರನ್ನು ಹೇಗೆ ಪ್ರೋತ್ಸಾಹಿಸಬಹುದು ಎಂಬುದನ್ನು ಪರಿಶೋಧಿಸುತ್ತದೆ ಹಾಗೂ ಮಕ್ಕಳ ಸಾಹಿತ್ಯದಲ್ಲಿ ಮಕ್ಕಳ ಕರ್ತೃತ್ವವನ್ನು (children's agency) ವರ್ಧಿಸುವುದನ್ನು ಪ್ರತಿಪಾದಿಸುತ್ತದೆ. ಸ್ಕೂಲ್ ಮೇ ಸೀಖಾ ಔರ್ ಸಿಖಾಯಾ (ಮುಸ್ಕಾನ್, 2022) ಎಂಬುದು ಭೋಪಾಲ್‌ನ ಗಂಗಾನಗರದ ಕೊಳೆಗೇರಿಯ ವಸತಿ ಪ್ರದೇಶದ ಗೋಂಡಿ ಬುಡಕಟ್ಟು ನಿವಾಸಿಯಾದ ನಿಕಿತಾ ಧುರ್ವೆ ಬರೆದ ಕಥೆ. ಅವಳು ತನ್ನ ಸ್ನೇಹಿತರೊಂದಿಗೆ ಶಾಲೆಯೊಂದಕ್ಕೆ ಸೇರುವ ಉತ್ಸಾಹದೊಂದಿಗೆ ಕಥೆಯು ಪ್ರಾರಂಭವಾಗುತ್ತದೆ. ಆದರೆ ತರಗತಿಯಲ್ಲಿ ಅವರಿಗಾಗುವ ಅನುಭವಗಳು ಬಹಳ ತ್ವರಿತವಾಗಿ ಅವರ ಈ ಉತ್ಸಾಹವನ್ನು ನಿರಾಶೆಗೆ ತಿರುಗಿಸುತ್ತವೆ. ಶಾಲೆಯು ಕಾರ್ಯನಿರ್ವಹಿಸುವ ವಿಧಾನಗಳು ಅವರನ್ನು ಏನೋ ಕಳೆದುಕೊಂಡ ಭಾವಕ್ಕೆ ತಳ್ಳುತ್ತವೆ. ಶಿಕ್ಷಕರು ಅವರ ಮನೆ ಭಾಷೆಯಾದ ಗೋಂಡಿಗಿಂತ ಭಿನ್ನವಾದ ಭಾಷೆಯಲ್ಲಿ ಮಾತನಾಡುತ್ತಿರುತ್ತಾರೆ ಮತ್ತು ಆ ಬಗ್ಗೆ ಸ್ಪಷ್ಟತೆ ಪಡೆಯಲು ಪ್ರಯತ್ನಿಸಿದಾಗ ಶಿಕ್ಷಕರಿಂದ ನಿಂದನೆಗೆ ಒಳಗಾಗುತ್ತಿರುತ್ತಾರೆ. ಆದರೆ ಮಕ್ಕಳು ತಮ್ಮ ಔಪಚಾರಿಕ ಶಿಕ್ಷಣದ ಕನಸನ್ನು ಬಿಟ್ಟುಕೊಡಲು ಬಯಸುವುದಿಲ್ಲ. ಆದ್ದರಿಂದ ಅವರು ಈ ಪರಿಸ್ಥಿತಿಯಿಂದ ಹೊರಬರಲು ಮಾರ್ಗಗಳನ್ನು ಹುಡುಕಲು ಪ್ರಾರಂಭಿಸುತ್ತಾರೆ. ಈ ಸಮಾಲೋಚನೆಯ ಮೂಲಕ, ಬರಹಗಾರರಾದ ಮಕ್ಕಳು ಶೈಕ್ಷಣಿಕ ಬೋಧನಾ ವಿಧಾನದ ಕುರಿತು ಸೂಕ್ತ ಪ್ರಶ್ನೆಗಳನ್ನು ಎತ್ತುತ್ತಾರೆ.

ತರಗತಿಯಲ್ಲಿನ ಕಥೆ

ನಮ್ಮ ಶಾಲೆಯ ಐದನೇ ತರಗತಿಯಲ್ಲಿ ಓದುತ್ತಿರುವ 10ರಿಂದ 15 ವರ್ಷದೊಳಗಿನ 20 ವಿದ್ಯಾರ್ಥಿಗಳ ಮಿಶ್ರ ಗುಂಪಿಗೆ ಈ ಪುಸ್ತಕವನ್ನು ಪರಿಚಯಿಸಲಾಯಿತು. ಕಥೆಯಲ್ಲಿ ತೆರೆದುಕೊಳ್ಳುವ ಸನ್ನಿವೇಶಗಳಿಗೆ ಎಷ್ಟು ಸುಲಭವಾಗಿ ಮಕ್ಕಳು ತಮ್ಮನ್ನು ಗುರುತಿಸಿಕೊಂಡರು ಎಂಬುದು ಸಾಕಷ್ಟು ಆಶ್ಚರ್ಯಕರವಾಗಿ ಕಾಣುತ್ತದೆ. ಕಥೆಯಲ್ಲಿನ ಒಂದೆರಡು ವಾಕ್ಯಗಳು ಗೋಂಡಿ ಭಾಷೆಯಲ್ಲಿ ಇವೆ. ಇವುಗಳನ್ನು ಓದಿದಾಗ, ಮಕ್ಕಳಿಂದ ಕೆಲವು ವಿನಂತಿಗಳು ಕೇಳಿಬಂದವು. 'ಅದನ್ನು ಇನ್ನೊಮ್ಮೆ ಓದಿ'. 'ನೀವು ಏನೆಂದು ಓದಿದಿರಿ?' ಎಂದು ಕೇಳಿದರು. ಸಂಭಾಷಣೆಯ ಹರಿವು ಮತ್ತು ಕೆಲವು ಪರಿಚಿತ ಪದಗಳ ಆಧಾರದ ಮೇಲೆ ಅವರು ಏನನ್ನು ತಿಳಿಸುತ್ತಿದ್ದಾರೆಂದು ಊಹಿಸಲು ಪ್ರಯತ್ನಿಸುತ್ತಿದ್ದರು. ತರಗತಿಯಲ್ಲಿ ಗೋಂಡಿ ಮಾತನಾಡುವ ಮಕ್ಕಳಿರಲಿಲ್ಲ, ಆದರೆ ಆ ಮಕ್ಕಳಿಗೆ ಗೋಂಡಿ ಮಾತನಾಡುವ ಸ್ನೇಹಿತರಿದ್ದರು. ಅವರ ಉತ್ಸಾಹದ ಕಾರಣವು ಕೇವಲ ಅವರಿಗೆ ಪರಿಚಿತವಾಗಿದ್ದ ಭಾಷೆಯಿಂದ ಬಂದಿರಲಿಲ್ಲ, ಆದರೆ ಆ ಕಥೆಯ ಮೂಲದೊಂದಿಗೆ ಅವರಿಗೆ ಹೆಚ್ಚು ಸಂಬಂಧ ಇದ್ದಿದ್ದರಿಂದ ಬಂದಿತ್ತು ಎಂದು ಸುಗಮಕಾರರಾಗಿ ಅರ್ಥಮಾಡಿಕೊಳ್ಳಬಹುದಾಗಿತ್ತು. ರಾಗಿಣಿ ಲಲಿತ್ ಅವರು ಹಿಮಾಚಲ ಪ್ರದೇಶದ ಮಕ್ಕಳ ಗುಂಪಿಗೆ ಇದೇ ಕಥೆಯನ್ನು ಓದಿದಾಗ, ಬೆಟ್ಟಗಳಲ್ಲಿ ವಾಸಿಸುವ ಮಕ್ಕಳು ನಿಕಿತಾ ಮತ್ತು ಅವರ ಸ್ನೇಹಿತರೊಂದಿಗೆ ತಕ್ಷಣವೇ ತಮ್ಮನ್ನು ಗುರುತಿಸಿಕೊಂಡರು ಎಂಬುದನ್ನು ಕಂಡುಕೊಂಡರು.

ಅನುಭವಗಳನ್ನು ಹಂಚಿಕೊಳ್ಳುವುದು

ಕಥೆ ಹೇಳಿದ ನಂತರ, ಮಕ್ಕಳಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಕೆಲವು ಉತ್ತೇಜಕ ಪ್ರಶ್ನೆಗಳನ್ನು ಕೇಳ ಸುಗಮಗೊಳಿಸಲಾಯಿತು. ಉದಾಹರಣೆಗೆ, "ಆ ನಾಲ್ಕು ಹುಡುಗಿಯರ ಬಗ್ಗೆ ನಿಮಗೆ ಏನನ್ನಿಸುತ್ತದೆ?" 'ಶಾಲೆಯಲ್ಲಿ ನೀವು ಎಂದಾದರೂ ಕಳೆದುಹೋದಂತಹ ಭಾವನೆಯನ್ನು ಅನುಭವಿಸಿದ್ದೀರಾ?' 'ನೀವು ಕಳೆದುಹೋದಂತೆ ಭಾಸವಾದರೆ ನೀವು ಏನು ಮಾಡುತ್ತೀರಿ?', 'ತಮ್ಮ ಕಾರ್ಯಚಟುವಟಿಕೆಯನ್ನು ಬದಲಾಯಿಸಿಕೊಳ್ಳುವಂತೆ ಯಾರಾದರೂ ವಯಸ್ಕರನ್ನು ನೀವು ಕೇಳಿದ್ದೀರಾ?'. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಉತ್ಸುಕರಾಗಿದ್ದರು ಮತ್ತು ಇತರರ ಕಥೆಗಳನ್ನು ಕೇಳಿಸಿಕೊಳ್ಳುವಂತೆ ನಾವು ಅವರಿಗೆ ಹೇಳಬೇಕಾಯಿತು. ಇವುಗಳನ್ನು ಮೌಖಿಕವಾಗಿ ಹಂಚಿಕೊಳ್ಳಲಾಯಿತಾದರೂ ಕೆಲವು ಮಕ್ಕಳು ಅವುಗಳನ್ನು ಬರೆದರು ಕೂಡ. ಈ ಪ್ರಕ್ರಿಯೆಯಿಂದ ಮೂರು ರೀತಿಯ ಕಥೆಗಳು ಹುಟ್ಟಿಕೊಂಡವು.

ಶಾಲೆಯಲ್ಲಿನ ಅನುಭವಗಳು

10 ವರ್ಷದ ಬಾಲಕನೊಬ್ಬ ತನ್ನ ಹಳ್ಳಿಯ ಶಾಲೆಯಲ್ಲಿ ಶಿಕ್ಷಕರು ಬೋರ್ಡ್ನ ಮೇಲೆ ಏನನ್ನಾದರೂ ಬರೆದು ಅದನ್ನು ನಕಲು ಮಾಡುವಂತೆ ಮಕ್ಕಳಿಗೆ ಹೇಳುತ್ತಾರೆ ಎಂದು ಹಂಚಿಕೊಂಡನು; ಮಕ್ಕಳಿಗೆ ಬರೆಯಲು ಸಾಧ್ಯವಾಗದಿದ್ದರೆ ಅಥವಾ ಅವರು ತಪ್ಪು

ಮಾಡಿದರೆ, ಅವರನ್ನು 'ಮರದಿಂದ ಆಗಷ್ಟೇ ಮುರಿದು ತಂದ ಹಸಿರು ಕೋಲಿನಿಂದ' ಹೊಡೆಯಲಾಗುತ್ತಿತ್ತು. 'ನಾವು ತರಗತಿಯಿಂದ ಹೊರಗೆ ಹೋಗಲು ಹೇಳಬಹುದಾದ ಕಾರಣಗಳ ಬಗ್ಗೆ ಯೋಚಿಸುತ್ತಿದ್ದೆವು. ನಮಗೆ ಶಾಲೆಗೆ ಹೋಗಬೇಕೆಂಬ ಮನಸ್ಸೇ ಇರುತ್ತಿರಲಿಲ್ಲ. ಆದರೆ ಕುಟುಂಬದ ಸದಸ್ಯರು ನಮ್ಮನ್ನು ಹೋಗುವಂತೆ ಒತ್ತಾಯಿಸುತ್ತಿದ್ದರು'. ಇಂತಹದ್ದೇ ರೀತಿಯ ಅನುಭವವನ್ನು 11 ವರ್ಷದ ಬಾಲಕಿ ಹಂಚಿಕೊಂಡಳು. 'ಸರ್ ನಮಗೆ ಕಂಠಪಾಠ ಮಾಡುವಂತೆ ಹೇಳುತ್ತಿದ್ದರು. ಆದರೆ ನನಗೆ ಅದನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ನಾನು ನಿಜವಾಗಿಯೂ ಪ್ರಯತ್ನಿಸುತ್ತಿದ್ದೆ. ಆದರೂ ನನಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅವರು ನಮ್ಮನ್ನು ಕೋಲಿನಿಂದ ಹೊಡೆಯುತ್ತಿದ್ದರು, ಆಗ ನನಗೆ ತುಂಬಾ ಅಸಮಾಧಾನವಾಗುತ್ತಿತ್ತು'. "ಸರ್ ನಮ್ಮನ್ನು ಮೇಲಿನಿಂದ ಕೆಳಕ್ಕೆ ದುರುಗುಟ್ಟಿ ನೋಡುತ್ತಿದ್ದರು" ಎಂದು ಸಹ ಒಂದು ಹುಡುಗಿ ಬರೆದಿದ್ದಳು. ಇದನ್ನು ತನ್ನ ತಾಯಿಯೊಂದಿಗೆ ಹಂಚಿಕೊಳ್ಳಲು ಅವಳಿಗೆ ಸಾಧ್ಯವಾಗದೆ, ಆ ಶಿಕ್ಷಕನು ಸರಿಯಾಗಿ ಪಾಠ ಮಾಡುತ್ತಿಲ್ಲ ಎಂದು ಹೇಳಿದ್ದಳು. ಹಾಗಾಗಿ ಅವಳ ತಾಯಿ ಶಾಲೆಯಿಂದ ಬಿಡಿಸಿದ್ದಳು. ಕೇವಲ ಒಂದು ವರ್ಷದ ಹಿಂದೆ ತನ್ನ ಶಿಕ್ಷಣ ಪಯಣವನ್ನು ಪ್ರಾರಂಭಿಸಿದ 14 ವರ್ಷದ ಹುಡುಗಿ ಶಾಲೆಯ ಭಾಗವಾಗುವ ತನ್ನ ಆರಂಭಿಕ ಪ್ರಯತ್ನದ ಬಗ್ಗೆ ಬರೆದಿದ್ದಳು. "ನಾವು ಮೊದಲ ಬಾರಿಗೆ ಶಾಲೆಗೆ ಹೋದಾಗ, ಅಲ್ಲಿ ನಾವು ಕೇವಲ ಮೂರು ದಿನ ಮಾತ್ರ ಇದ್ದೆವು. ನಮಗೆ ಅಲ್ಲಿ ಓದಲು ಸಾಧ್ಯವಾಗಲಿಲ್ಲ. ಮೊದಮೊದಲು ಇದು ಹೊಸ ಸ್ಥಳವಾದ ಕಾರಣ ಹೀಗೆ ಆಗುತ್ತಿದೆ ಎಂದು ನಾವು ಭಾವಿಸಿದ್ದೆವು. ಆ ವ್ಯಕ್ತಿ (ಶಿಕ್ಷಕ) ನಮಗೆ ಹೊಡೆಯುವುದಿಲ್ಲ ಎಂದು ನಾನು ಭಾವಿಸಿದ್ದೆ". ನನ್ನ ಗೆಳತಿ ನಾವು ಪುಸ್ತಕವನ್ನು ತೆರೆದು ಕುಳಿತುಕೊಳ್ಳಬೇಕಷ್ಟೇ, ಅವರು ಹೊಡೆಯುವುದಿಲ್ಲ ಎಂದು ನನಗೆ ಭರವಸೆ ನೀಡಿದ್ದಳು. ಆದರೆ ಅದು ಖಾಲಿ ನೋಟ್ ಬುಕ್ ಆಗಿತ್ತು. ಶಿಕ್ಷಕರು ಬೋರ್ಡ್ ಅನ್ನು ದೊಡ್ಡ ದೊಡ್ಡ ವಾಕ್ಯಗಳಿಂದ ತುಂಬುತ್ತಿದ್ದರು. ನನಗೆ ಓದುವುದು ಹೇಗೆಂದು ತಿಳಿದಿರಲಿಲ್ಲ, ಆದರೆ ಶಿಕ್ಷಕರು ಬೇರೆ ಏನನ್ನೂ ಕಲಿಸುವುದಿಲ್ಲ ಎಂದು ಹೇಳಿದರು. 'ಹಾಗಾಗಿ ನಾವು ಬೇರೆ ಯಾವುದಾದರೂ ಶಾಲೆಯಲ್ಲಿ ಓದುತ್ತೇವೆಂದು 'ನನ್ನ ಗೆಳತಿ ಹೇಳಿದಳು'. ಶಿಕ್ಷಕರು ತಲೆಕೆಡಿಸಿಕೊಂಡಂತೆ ಕಾಣಲಿಲ್ಲ. 'ಸರಿ ಹೋಗಿ' ಎಂದು ಸುಮ್ಮನಾದರು. ಸುಗಮಕಾರರಾಗಿ, ನಾವು ಶಾಲೆಯ ಬಗ್ಗೆ ಕೆಲವಾದರೂ ಸಕಾರಾತ್ಮಕ ಅನುಭವಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿದೆವು. ಆದರೆ ಅಂತಹ ಯಾವ ಅನುಭವವೂ ಇರಲಿಲ್ಲ.

ಅವರ ಭಾಷೆ ಮತ್ತು ಹೊರಗಿನ ಪ್ರಪಂಚಕ್ಕೆ ಸಂಬಂಧಿಸಿದ ಅನುಭವಗಳು

18 ವರ್ಷದ ಹದಿಹರೆಯದ ಹುಡುಗಿಯೊಬ್ಬಳು ತನ್ನ ಸ್ನೇಹಿತೆಯರೊಂದಿಗೆ ತನ್ನ ಭಾಷೆಯಲ್ಲಿ (ಪಾರ್ಧಿ) ಮಾತನಾಡುವಾಗ ಇತರ ಮಕ್ಕಳು ಅವರು ತಮ್ಮ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಭಾವಿಸಿ ಶಿಕ್ಷಕರಿಗೆ ದೂರು ನೀಡುತ್ತಿದ್ದರು. 'ಮಧ್ಯಾಹ್ನದ ಊಟದ ವೇಳೆಯಲ್ಲಿ ಇತರ ಮಕ್ಕಳು ನಾವು ಪಾರ್ಧಿಗಳು ಎಂಬ ಕಾರಣಕ್ಕೆ ನಮ್ಮಿಂದ ದೂರ ಕುಳಿತುಕೊಳ್ಳುತ್ತಿದ್ದರು' ಎಂಬುದನ್ನು ಹಂಚಿಕೊಂಡಳು. ಇಂತಹದ್ದೇ ಅನುಭವವನ್ನು ಕಂಜರ್ ಸಮುದಾಯದ ಮಗುವೊಂದು ಹಂಚಿಕೊಂಡಿತು. 'ನಾನು ಮೊದಲು ಶಾಲೆಗೆ ಹೋಗುತ್ತಿದ್ದಾಗ, ನನ್ನ ಶಾಲೆಯ ಮಕ್ಕಳು ನಮ್ಮನ್ನು ಮತ್ತು ನಮ್ಮ ಭಾಷೆಯನ್ನು ಅಪಹಾಸ್ಯ ಮಾಡುತ್ತಿದ್ದರು' ಎಂದು ಅವಳು ಬರೆದಿದ್ದಾಳೆ. 'ಯಾರಾದರೂ ಅವರನ್ನು ಗೇಲಿ ಮಾಡಿದರೆ, ಅವರಿಗೆ ಹೇಗೆ ಅನಿಸುತ್ತದೆ? ನಾವು ಬೇರೆ ಭಾಷೆ ಮಾತನಾಡುತ್ತೇವೆ ಎಂಬ ಕಾರಣಕ್ಕೆ ಯಾರೂ ನಮ್ಮನ್ನು ನಿಂದಿಸಬಾರದು'.

ವಯಸ್ಕರ ಮುಂದೆ ತಮ್ಮ ಅಭಿಪ್ರಾಯಗಳನ್ನು ಮುಂದಿಡುವ ಅನುಭವಗಳು

14 ವರ್ಷದ ಬಾಲಕಿಯೊಬ್ಬಳು ತನ್ನ ತಾಯಿಯು ತನ್ನನ್ನು ಕೆಲವೊಮ್ಮೆ ಭಿಕ್ಷೆ ಬೇಡಲು ಕಳುಹಿಸುತ್ತಿದ್ದಳು, ಆದರೆ ಅದು ತನಗೆ ಇಷ್ಟವಿರಲಿಲ್ಲ ಎಂದು ಹಂಚಿಕೊಂಡಳು. ಚಿಂದಿ ಆಯಲು ಕೂಡಾ ಹೋಗದಿದ್ದರೆ ಅವಳ ತಾಯಿಯು ಅವಳ ಮೇಲೆ ಕೋಪಗೊಳ್ಳುತ್ತಿದ್ದಳು. ಅವಳು ತನ್ನ ತಾಯಿಗೆ ತುಂಬಾ ಹೆದರುತ್ತಿದ್ದಳು (ಈಗಲೂ ಸಹ ಹೆದರುತ್ತಾಳೆ). ಆದ್ದರಿಂದ ತನಗೆ ಭಿಕ್ಷೆಗೆ ಹೋಗಲು ಇಷ್ಟವಿಲ್ಲ ಎಂದು ಅವಳಿಗೆ ಹೇಳಲು ಸಾಧ್ಯವಾಗಲಿಲ್ಲ. ಆದರೆ ಒಂದು ದಿನ ಧೈರ್ಯ ತಂದುಕೊಂಡು ಅಮ್ಮನಿಗೆ ಹೇಳಿದಳು. ಅವಳ ತಾಯಿ ಅವಳನ್ನು ಭಿಕ್ಷೆಗೆ ಕಳುಹಿಸುವುದನ್ನು ನಿಲ್ಲಿಸಿ ಶಾಲೆಗೆ ಸೇರಿಸಿದಳು. ಈ ಲೇಖಕಿಯರಲ್ಲಿ ಒಬ್ಬಳು ತನ್ನ ಶಾಲಾ ಜೀವನದ ವೈಯಕ್ತಿಕ ಅನುಭವವನ್ನು ಸಹ ಹಂಚಿಕೊಂಡಿದ್ದಾಳೆ. 'ನಾನು ಹತ್ತನೇ ತರಗತಿಯಲ್ಲಿದ್ದಾಗ, ಗಣಿತ ಶಿಕ್ಷಕರಾದ ತಿವಾರಿ ಸರ್ ಅವರು ಯಾವಾಗಲೂ ನನ್ನನ್ನು ಕಪ್ಪುಹಲಗೆಯ ಬಳಿ ಕರೆದು ಸಮಸ್ಯೆಯನ್ನು ವಿವರಿಸದೆ, ಅದನ್ನು ಪರಿಹರಿಸುವಂತೆ ನನಗೆ ಸೂಚಿಸುತ್ತಿದ್ದರು. ನನಗೆ ಅದು ಸಾಧ್ಯವಾಗದಿದ್ದಾಗ, ಅವರು ನನ್ನ ಜಡೆಯನ್ನು ಎಳೆಯುತ್ತಿದ್ದರು. ಇದು ಹಲವಾರು ದಿನಗಳವರೆಗೆ ನಡೆಯಿತು. ನಾನು ಅವರನ್ನು ಕಂಡರೆ ಹೆದರುತ್ತಿದ್ದೆ ಮತ್ತು ಅವರ ತರಗತಿಯನ್ನು ತಪ್ಪಿಸಿಕೊಳ್ಳಲು ಬಯಸುತ್ತಿದ್ದೆ. ಒಂದು ದಿನ ಅವರು ಪಾಠ ಮುಗಿಸಿ ಹೋಗುವಾಗ ನಾನು ಧೈರ್ಯ ತಂದುಕೊಂಡು ಅವರ ಹಿಂದೆ ಓಡಿದೆ. ಅವರು ನನಗೆ ಹೀಗೇಕೆ ಮಾಡುತ್ತಾರೆ ಎಂದು ನೇರವಾಗಿ ಕೇಳಿದೆ. ಅದಕ್ಕೆ, ಸರ್ ನಾನು ಉತ್ತಮ ಸಾಧನೆ ಮಾಡಬೇಕೆಂಬ ಕಾರಣಕ್ಕೆ ಹಾಗೆ ಮಾಡುತ್ತೇನೆ ಎಂದು ತಣ್ಣಗೆ ಪ್ರತಿಕ್ರಿಯಿಸಿದರು. ಪ್ರತಿಯಾಗಿ ಏನು ಹೇಳಬೇಕೆಂದು ನನಗೆ ತಿಳಿಯಲಿಲ್ಲ. ಆದರೆ ಅದಾದ ನಂತರ ಅವರು ನನ್ನ ಜಡೆ ಎಳೆಯುವುದನ್ನು ನಿಲ್ಲಿಸಿದರು. ನಾನೂ ಸಹ ಅವರ ಬಗ್ಗೆ ಭಯ ಪಡುವುದನ್ನು ನಿಲ್ಲಿಸಿದೆ'.

ಮಕ್ಕಳ ಅಭಿವ್ಯಕ್ತಿಗಳು ಈ ಕೆಳಗಿನವುಗಳನ್ನು ಸ್ಪಷ್ಟವಾಗಿ ಸೂಚಿಸುತ್ತವೆ:

1. ಮಕ್ಕಳು ತಾರತಮ್ಯವನ್ನು ಗುರುತಿಸುತ್ತಾರೆ. ಅದು ಭಾಷೆ ಅಥವಾ ಜಾತಿ ಅಥವಾ ಬೇರೆ ಯಾವ ಕಾರಣಕ್ಕೆ ಎಂಬುದನ್ನು ವಿಶ್ಲೇಷಿಸಲು ಅವರಿಗೆ ಸಾಧ್ಯವಾಗದಿರ-ಬಹುದು, ಆದರೆ ತಮ್ಮನ್ನು ಕೀಳಾಗಿ ನಡೆಸಿಕೊಂಡಿರುವ ಅನುಭವವನ್ನು ಅಲಕ್ಷ್ಯಕ್ಕೆ ಒಳಗಾದ ಸಮುದಾಯಗಳ ಅನೇಕ ಮಕ್ಕಳು ಸಮಾಜದಿಂದ ನಿರಂತರವಾಗಿ ಅನುಭವಿಸುತ್ತಿರುತ್ತಾರೆ. ಅದೂ ಕೂಡ ತುಂಬಾ ಪ್ರಭಾವಶಾಲಿಯಾದ ವಯಸ್ಸಿನಲ್ಲಿ. ಇದು ಅವರು ಬೆಳೆದಂತೆ ಅವರ ವ್ಯಕ್ತಿತ್ವದ ಮೇಲೆ ಗಮನಾರ್ಹ ಮತ್ತು ಶಾಶ್ವತವಾದ ಪ್ರಭಾವವನ್ನು ಬೀರುವ ಸಾಧ್ಯತೆಯಿದೆ.

2. ಮಕ್ಕಳ ಋಣಾತ್ಮಕ ಅನುಭವಗಳು ಅವರ ಮನಸ್ಸಿನಲ್ಲಿ ಪದರಗಳಾಗಿ ಉಳಿದುಬಿಡುತ್ತವೆ. ಅವರು ಹೇಗೆ ಹೊಡೆಸಿಕೊಂಡರು ಎಂಬ ವಿವರಗಳು ಅವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ ಮತ್ತು ಇವುಗಳನ್ನು ಅವರ ಅಭಿವ್ಯಕ್ತಿಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಸಾಮಾನ್ಯವಾಗಿ ಮಕ್ಕಳು, ಅಲ್ಲಿ ಯಾರ್ಯಾರಿದ್ದರು, ಏನೇನಾಯಿತು ಎಂಬಂಥ ವಿವರಗಳನ್ನು ಹಂಚಿ-ಕೊಳ್ಳುತ್ತಾರೆ. ಅವು ಅವರ ಅನುಭವದ ಮೇಲೆ ಪ್ರಭಾವ ಬೀರುವುದಿಲ್ಲ. ಆದರೆ ಮಗುವಿನ ಸ್ಮರಣೆಯಲ್ಲಿ ಮಹತ್ವದ್ದಾಗಿವೆ. ಈ ಸ್ಪಷ್ಟತೆಯು ಅದನ್ನು ಹೆಚ್ಚು ನೈಜ ಮತ್ತು ನಂಬಲರ್ಹವಾಗಿಸುತ್ತದೆ ಎಂದು ಅವಳು/ಅವನು ನಂಬಿರುವ ಸಾಧ್ಯತೆಯಿದೆ. ಅಥವಾ ಅವಳು/ಅವನು ಘಟನೆಯನ್ನು ಅದರ ವಿವರಗಳಿಂದ ಪ್ರತ್ಯೇಕಿಸಲು ಇನ್ನೂ ಸಾಧ್ಯವಾಗಿರಲಿಕ್ಕಿಲ್ಲ. ಈ ರೀತಿಯ ಸ್ವಭಾವವನ್ನು ಅಭಿವ್ಯಕ್ತಗೊಳಿಸುವುದು ಮಕ್ಕಳ ಪಾಲಿಗೆ ಚಿಕಿತ್ಸಕ ಗುಣವನ್ನು ಹೊಂದಿರುತ್ತದೆ. ಅವರು ಅದಕ್ಕೆ ಧ್ವನಿ ರೂಪ ನೀಡಿದಾಗ ವಯಸ್ಕರು ಅವರು ಭಾವಿಸಿದ್ದನ್ನು ಮತ್ತು ಅನುಭವಿಸಿದ್ದನ್ನು ಮಾನ್ಯ ಮಾಡುತ್ತಾರೆ.

3. ಗುಂಪು ಪ್ರಕ್ರಿಯೆಯ ಮೂಲಕ ಈ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಂಡಾಗ, ಇದು 'ನನಗೆ' ಮಾತ್ರ ಸಂಭವಿಸಿಲ್ಲ ಎಂದು ಪ್ರತಿ ಮಗುವಿಗೂ ಅರಿವಾಗುತ್ತದೆ. ಮಕ್ಕಳು ತುಂಬಾ ಚಿಕ್ಕವರಾಗಿದ್ದರೂ ಸಹ, ಅವರು ಈ ದತ್ತಾಂಶವನ್ನು – ಅನುಭವಗಳ ಒಂದು ಗುಚ್ಛ – ಬಳಸಿಕೊಂಡು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲು ಸಮರ್ಥರಾಗಿರುತ್ತಾರೆ. ಇದು ಸಮಾಜದ ಕಾರ್ಯ-ಚಟುವಟಿಕೆಯ ಭಾಗವಾಗಿದೆ ಮತ್ತು 'ನನ್ನ' ತಪ್ಪು ಅಲ್ಲ ಎಂದು ತಿಳಿದುಕೊಳ್ಳುತ್ತಾರೆ. ಸಾಮಾಜಿಕ ನ್ಯಾಯದ ಮೌಲ್ಯಗಳ ಮೇಲೆ ಆಧಾರಿತವಾದ ಶಿಕ್ಷಣಕ್ಕೆ ಇದು ಅವಶ್ಯಕವಾಗಿದೆ.

4. ನಮ್ಮ ಸಂಸ್ಕೃತಿಯಲ್ಲಿ, ಮಗು ಮತ್ತು ವಯಸ್ಕರಿಬ್ಬರೂ (ಶಿಕ್ಷಕ, ಪೋಷಕರು ಅಥವಾ ಪೋಷಕ/ಹಿರಿಯರ ರೂಪದ ಯಾವುದೇ ವ್ಯಕ್ತಿ) ವಿಭಿನ್ನವಾಗಿ ಯೋಚಿಸಬಹುದು, ಮಗುವಿನ ಆಲೋಚನೆಯು ಸಹ ಮೌಲ್ಯಯುತವಾದದ್ದು ಎಂಬುದು ಸ್ವೀಕಾರಾರ್ಹವಾಗಿಲ್ಲ. ಆದ್ದರಿಂದ, ಅಂತಹ ಚರ್ಚೆಗಳು ತರಗತಿಗಳಲ್ಲಿ ನಡೆಯುವುದಿಲ್ಲ.

5. 'ತಮ್ಮನ್ನು ವಿರೋಧಿಸುವವರು' ಎಂದು ಮಕ್ಕಳು ವರ್ಗೀಕರಿಸಿದವರ ಬಗೆಗಿನ ನೋವು ಅಥವಾ ಕೋಪದ ಅನುಭವಗಳನ್ನು ಹಂಚಿಕೊಳ್ಳಬಹುದಾದರೂ, ಅವರಲ್ಲಿ ಹೆಚ್ಚಿನವರು ತಮ್ಮ 'ರಕ್ಷಕ'ರನ್ನು ಸವಾಲೊಡ್ಡುವ ಪರಿಸ್ಥಿತಿಯಲ್ಲಿ ನಿಲ್ಲಿಸಿ ನೋಡುವುದು, ಅವರಿಗೆ ಸುಲಭವಲ್ಲ. ಬಹುಶಃ ಮಗುವಿನ ಮನಸ್ಸಿನಲ್ಲಿ ಯಾವುದೋ ಒಂದು ತರ್ಕವಿರಬಹುದು. ಅದು ಆ ವ್ಯಕ್ತಿಯು ತನ್ನ ಚೌಕಟ್ಟಿನಲ್ಲಿ ಇಲ್ಲದೆ ತಾನು "ಸ್ವಯಂ" ಎಂಬ ಪರಿಕಲ್ಪನೆಯನ್ನು ರಚಿಸಿಕೊಳ್ಳಲು ಕಷ್ಟವಾಗುತ್ತದೆ' ಎಂದು ಆ ತರ್ಕವು ಹೇಳುತ್ತಿರಬಹುದು.

ವಿವಿಧ ಸಾಮಾಜಿಕ-ಆರ್ಥಿಕ ಗುಂಪುಗಳ ವಿದ್ಯಾರ್ಥಿಗಳ ನಡುವೆ ಅನೇಕ ಸಂಭಾಷಣೆಗಳನ್ನು ತೆರೆದಿಡಲು ಸ್ಕೂಲ್ ಮೇ ಸೀಖಾ ಔರ್ ಸಿಖಾಯಾ ಕಥೆಯನ್ನು ಬಳಸಬಹುದು ಎಂಬುದು ಸ್ಪಷ್ಟವಾಗಿದೆ.

ಶಿಕ್ಷಾರ್ಥಿಗಳು, ಶಿಕ್ಷಕರ ನಡವಳಿಕೆ, ಕಲಿಕೆಯ ತೊಂದರೆಗಳು, ಗೆಳೆಯರೊಂದಿಗೆ ಹೊಂದಾಣಿಕೆ, ಹಿಂಸೆ ಮತ್ತು ನಿಂದನೆ ಮುಂತಾದ ಶಾಲಾ ಜೀವನದ ಅಂಶಗಳಲ್ಲಿ ಒಂದು ಅಥವಾ ಹಲವು ಅಂಶಗಳೊಂದಿಗೆ ತೊಂದರೆಗಳನ್ನು ಹೊಂದಿರಬಹುದು. ಇಂತಹ ಚರ್ಚೆಗಳು ಶಾಲೆಗಳಿಗೂ ಸಹ ಪ್ರತಿಫಲನ ಮಾಡಿಕೊಳ್ಳುವ ಅವಕಾಶಗಳಾಗಿವೆ.

ಇಲ್ಲಿಯವರೆಗೆ ವಿವರಿಸಿದ ಪಾರಸ್ಪರಿಕ ಕ್ರಿಯೆಯು ಶಾಲಾ ವ್ಯವಸ್ಥೆಯು ಮಕ್ಕಳಿಗೆ ಬೇರೆ ರೀತಿಯಲ್ಲಿ ಹೊಂದಿಕೊಳ್ಳುವ ಅಗತ್ಯವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಕಥೆಯನ್ನು ವಿಮರ್ಶಿಸಿದ ಅಂಜಲಿ ನೊರೊನ್ಹಾರವರು[ii] "ಇಲ್ಲಿ ವಿವರಿಸಿದ ಮಕ್ಕಳ ಅನುಭವಗಳು ಸಾರ್ವತ್ರಿಕವಾಗಿವೆಯೆಂದು ಕಂಡುಕೊಳ್ಳುತ್ತಾರೆ".

ಕಥೆಗಳಲ್ಲಿ ಮಕ್ಕಳ ಕರ್ತೃತ್ವತೆ

ಮೇಲೆ ನೋಡಿದಂತೆ, ಕಥೆಗಳು ಸಂಭಾಷಣೆಗಳನ್ನು ಪ್ರಾರಂಭಿಸಲು ನಮಗೆ ಒಂದು ಸುರಕ್ಷಿತ ಅವಕಾಶ ಮಾಡಿಕೊಡುತ್ತವೆ. ಅವುಗಳು ತುಂಬಾ ವೈಯಕ್ತಿಕವಾಗಿ ಇರದಿದ್ದರೂ ನಾವು ಪ್ರತಿಫಲಿಸಲು ಮತ್ತು ಉದ್ದೇಶಪೂರ್ವಕವಾಗಿ ಪ್ರಾರಂಭಿಸಬಹುದಾದ ದತ್ತಾಂಶ ಅಥವಾ ವಿಷಯವನ್ನು ಒದಗಿಸುತ್ತವೆ. ಇದಕ್ಕಾಗಿ ನಮಗೆ

ಮಕ್ಕಳನ್ನು ಕೇಂದ್ರವನ್ನಾಗಿ ಹೊಂದಿರುವ, ಕೇವಲ ಪಾತ್ರವಾಗಿ ಮಾತ್ರವಲ್ಲದೆ, ಮಗುವಿನ ವಿಶ್ವ ದೃಷ್ಟಿಕೋನವು ವಯಸ್ಕರ ದೃಷ್ಟಿಕೋನದೊಂದಿಗೆ ಸಂಘರ್ಷದಲ್ಲಿರುವ ಅಥವಾ ಮಕ್ಕಳ ಗುಂಪಿನಲ್ಲಿ ವಿಭಿನ್ನ ದೃಷ್ಟಿಕೋನಗಳಿರುವ ಕಥೆಗಳನ್ನು ನೀಡುವ ಪುಸ್ತಕಗಳು ಬೇಕು.

ಸ್ಕೂಲ್ ಮೇ ಸೀಖಾ ಔರ್ ಸಿಖಾಯಾ ಕಥೆಯಲ್ಲಿನ ಒಂದು ವಿಮರ್ಶಾತ್ಮಕ ಅಂಶವೆಂದರೆ ಈ ಕಥೆಯಲ್ಲಿ ಮಕ್ಕಳ ಹಲವಾರು ಹಂತದ ಧ್ವನಿಗಳು ಕೇಳಿ ಬರುತ್ತಿವೆ. ಮೊದಲನೆಯದಾಗಿ, ಕಥೆಯು ಮಗುವಿನಿಂದ ಬರೆಯಲ್ಪಟ್ಟಿದೆ; ಎರಡನೆಯದಾಗಿ, ಮಕ್ಕಳ ಭಾವನೆಗಳು ಇಲ್ಲಿ ಚೆನ್ನಾಗಿ ಹೊರಹೊಮ್ಮಿವೆ; ಮತ್ತು ಕೊನೆಯದಾಗಿ ಮಕ್ಕಳು ಸಾಮೂಹಿಕವಾಗಿ ಯೋಜನೆಯನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸುತ್ತಾರೆ. ಮಕ್ಕಳ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಮತ್ತು ಸ್ವೀಕರಿಸುವ ಒಬ್ಬ ವ್ಯಕ್ತಿ ಎಂದರೆ, ಅದು ಶಿಕ್ಷಕ. ಇದು ಕಥೆಗೆ ನಿರ್ಣಯ ಮತ್ತು ಸುಖಾಂತ್ಯವನ್ನು ನೀಡುತ್ತದೆ. ಜೀವನದಲ್ಲಿ ಇದು ಯಾವಾಗಲೂ ಸಾಧ್ಯವಾಗದಿರಬಹುದು. ಆದ್ದರಿಂದ, ಮಕ್ಕಳ ಕರ್ತೃತ್ವವನ್ನು ಸ್ಪಷ್ಟವಾಗಿ ಸ್ಥಾಪಿಸುವುದು ಹೆಚ್ಚು ಮುಖ್ಯವಾಗುತ್ತದೆ.

"ಒಬ್ಬರ ಕ್ರಿಯೆಗಳು ಉದ್ದೇಶಪೂರ್ವಕವಾಗಿ ಕೆಲವು ಪರಿಣಾಮಗಳನ್ನು ಉಂಟುಮಾಡುತ್ತವೆ" ಎಂದು ಬಂಡೂರರವರು (2017)[iii] ಕರ್ತೃತ್ವವನ್ನು ವ್ಯಾಖ್ಯಾನಿಸಿದ್ದಾರೆ; ಮ್ಯಾಥೀಸ್ (2016)[iv] 'ಕರ್ತೃತ್ವವನ್ನು ಇಲ್ಲಿ ಒಬ್ಬರ ಅಸ್ಮಿತೆ ಮತ್ತು ಗ್ರಹಿಕೆಗಳನ್ನು ಗೋಚರಿಸುವಂತೆ ಮಾಡುವ ಮತ್ತು ಒಬ್ಬರ ಜೀವನದ ವೈಯಕ್ತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಹೆಚ್ಚಿಸಲು ಮತ್ತು ಸಬಲೀಕರಣಗೊಳಿಸಲು ಇತರರಿಂದ ಸಕ್ರಿಯವಾಗಿ ಅಂಗೀಕರಿಸಲ್ಪಡುವುದು' ಎಂದು ವ್ಯಾಖ್ಯಾನಿಸುತ್ತಾರೆ. ಮುಂದುವರಿದು, 'ಲೇಖಕರು ಮತ್ತು ಸಚಿತ್ರಕಾರರು ಕರ್ತೃತ್ವವನ್ನು ಮತ್ತಷ್ಟು ಉತ್ಕೃಷ್ಟಗೊಳಿಸುವ ಸಂದರ್ಭಗಳು ಮತ್ತು ಪಾತ್ರಗಳನ್ನು ರಚಿಸುವ ಶಕ್ತಿಯನ್ನು ಹೊಂದಿದ್ದಾರೆ' ಎಂದು ಮ್ಯಾಥೀಸ್ ಸೇರಿಸುತ್ತಾರೆ.ಚರ್ಚೆಯಲ್ಲಿರುವ ಕಥೆಯು ಪಠ್ಯದ ಮೂಲಕ ಅಂಚಿಗೆ ದೂಡಲ್ಪಟ್ಟಿರುವ ಸಮುದಾಯದ ಮಗುವಿನ ಸಾಂಸ್ಕೃತಿಕ ಹಿನ್ನೆಲೆ ಮತ್ತು ಆಕಾಂಕ್ಷೆಗಳನ್ನು ಪ್ರಸ್ತುತಪಡಿಸಲು ಸಮರ್ಥವಾಗಿರುತ್ತದೆ. ಇದೇ ಸಮಯದಲ್ಲಿ ರೇಖಾಚಿತ್ರಗಳು ನಮಗೆ ಕಥಾನಾಯಕನ ಜೀವನ ಪರಿಸ್ಥಿತಿಗಳಿಗೆ ಸಂದರ್ಭವನ್ನು ಒದಗಿಸುತ್ತವೆ. ಶಾಲೆಯ ಬಗ್ಗೆ ತಿಳಿಸುವ ಮಕ್ಕಳ ಸಾಹಿತ್ಯ ನಮ್ಮ ಸುತ್ತಮುತ್ತ ಸಾಕಷ್ಟು ಇದೆ. ಆದಾಗ್ಯೂ, ಹೆಚ್ಚಿನ ಕಥೆಪುಸ್ತಕಗಳು ಮೊದಲ ಬಾರಿಗೆ ಶಾಲೆಗೆ ಹೋಗುವವರನ್ನು ಶಾಲೆಗೆ ಅಥವಾ ಅದೇ ರೀತಿಯ ವ್ಯವಸ್ಥೆಗೆ ಸಿದ್ಧಪಡಿಸುವ ಕಲ್ಪನೆಯೊಂದಿಗೆ ಮುಖ್ಯವಾಹಿನಿಯ ವ್ಯವಸ್ಥೆಯಲ್ಲಿ ಮಕ್ಕಳನ್ನು ಏಕೀಕರಣಗೊಳಿಸುವುದರ ಸುತ್ತ ಸುತ್ತುತ್ತವೆ. ಶಾಲೆಯ ಒಳಗೆ ಮಗುವಿನ ಕರ್ತೃತ್ವವನ್ನು ಪ್ರದರ್ಶಿಸುವ ಪುಸ್ತಕಗಳು ಬೆರಳೆಣಿಕೆಯಷ್ಟು ಮಾತ್ರ ಇವೆ. ಈ ವಿಷಯ ಕುರಿತು ಪ್ರಥಮ್ ಬುಕ್ಸ್ ಪ್ರಕಟಿಸಿದ ಹಲವಾರು ಪುಸ್ತಕಗಳಲ್ಲಿ ಶಬ್ನಮ್ ಮಿನ್‌ವಾಲಾ (2020) ಬರೆದ ದಿ ರೈಟ್ ವೇ ಸ್ಕೂಲ್, ಮಗುವಿನ ಸ್ವಾಭಾವಿಕ ವ್ಯಕ್ತಿತ್ವಕ್ಕೆ, ಅಂದರೆ ಅದರ ಜಿಜ್ಞಾಸೆಯ ಬಗ್ಗೆ ಅಥವಾ ಅದು ಹೇಗೆ ಬಟ್ಟೆ ಧರಿಸುತ್ತದೆ ಮತ್ತು ಹೇಗೆ ಕಾಣುತ್ತದೆ ಎಂಬುದಕ್ಕೂ ಅವಕಾಶವನ್ನು ನೀಡುತ್ತದೆ. ವಿದ್ರೋಹ್ ಕಿ ಛಾಪ್ ಛಾಪ್ (ಮುಸ್ಕಾನ್, 2020) ಅಂತಹ ಇನ್ನೊಂದು ಪುಸ್ತಕವಾಗಿದ್ದು, ಬರಹಗಾರ ರಿಂಚಿನ್ ಮಗು–ಕೇಂದ್ರಿತ ಬೋಧನಾ ವಿಧಾನವು ಶಿಕ್ಷಕಿಯನ್ನು ವಿದ್ಯಾರ್ಥಿ ಸ್ನೇಹಿಯನ್ನಾಗಿ ಮಾಡುತ್ತದೆ ಮತ್ತು ಮಕ್ಕಳ ಪಾಲಿಗೆ ತುಂಬಾ ಸ್ನೇಹಪರ ವ್ಯಕ್ತಿಯಂತೆ ಚಿತ್ರಿಸುತ್ತದೆ. ಆದರೆ ಶಿಕ್ಷಕಿಯು ತನ್ನ ವಯಸ್ಕ ಸ್ಥಾನದಿಂದ ಕಾರ್ಯನಿರ್ವಹಿಸುತ್ತಿದ್ದಾಳೆ ಎಂಬುದು ಸ್ಪಷ್ಟವಾದಾಗ ಕಥೆಯು ತಿರುವು ಪಡೆಯುತ್ತದೆ. ಅವರು ನಿಜವಾಗಿಯೂ ಮಕ್ಕಳನ್ನು ಸ್ವೀಕರಿಸಲು ಬಯಸಿದರೆ, ಅವರಲ್ಲಿ ಆಂತರಿಕ ರೂಪಾಂತರದ ಅಗತ್ಯವಿದೆ.ಹೆಚ್ಚಿನ ಪುಸ್ತಕಗಳನ್ನು ವಯಸ್ಕರು ಬರೆಯುತ್ತಾರೆ. ಅಲ್ಲಿ ವಯಸ್ಕರ ದೃಷ್ಟಿಕೋನದಿಂದ ಪಡೆದ ಮಗುವಿನ ಗ್ರಹಿಕೆಯು (ಅಥವಾ ಅವರ ಬಾಲ್ಯದ ನೆನಪುಗಳು) ವಿಷಯವನ್ನು ನಿರ್ಧರಿಸುತ್ತದೆ. ಆದರೆ ನಾವು ಚಿಕ್ಕ ಮಕ್ಕಳು ಮತ್ತು ಹದಿಹರೆಯದ ಮಕ್ಕಳನ್ನು ಅವರ ಕಥಾಪುಸ್ತಕಗಳ ಲೇಖಕರಾಗುವಂತೆ ಪ್ರೋತ್ಸಾಹಿಸಿದರೆ, ಮಕ್ಕಳು ತಮ್ಮ ಅನಿಸಿಕೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಲು ಮತ್ತು ಮಕ್ಕಳ ದೃಷ್ಟಿಕೋನಗಳನ್ನು ಗೌರವಿಸಲು ಒಂದು ಅವಕಾಶವನ್ನು ನಿರ್ಮಿಸಲು ಇದು ಆರಂಭಿಕ ಹೆಜ್ಜೆಯಾಗುತ್ತದೆ.

ಮಕ್ಕಳ ಧ್ವನಿಗೆ ಅವಕಾಶ ನೀಡುವ ಕಥೆಗಳು ಶಾಲೆಯನ್ನು ಪ್ರವೇಶಿಸಿದಾಗ ಶಾಲೆಯ ಪ್ರಕ್ರಿಯೆಗಳ ಕುರಿತು ಚರ್ಚೆಗಳು ಮತ್ತು ಪ್ರಶ್ನೆಗಳು ತೆರೆದುಕೊಳ್ಳುವ ಸಾಧ್ಯತೆ ಇದೆಯೇ? ಥಾಮ್ಸನ್ ಮತ್ತು ಜಾನ್ಸನ್ (2007),[v] ಶಿಕ್ಷಕರೂ ಸಹ ಮಕ್ಕಳನ್ನು 'ಅತ್ಯಂತ ಸೃಜನಶೀಲರು, ಹೆಚ್ಚಿನ ಒಳನೋಟ ಮತ್ತು ತಿಳುವಳಿಕೆ ಹೊಂದಿದ್ದಾರೆ!' ಎಂಬ ದೃಷ್ಟಿಕೋನದಿಂದ ನೋಡುತ್ತಾ ಅವರ ಕರ್ತೃತ್ವವನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಿಹೇಳುತ್ತಾರೆ. ನಿಕಿತಾ ಬರೆದ ಕಥೆಯಲ್ಲಿನ ಶಿಕ್ಷಕರಂತೆ, ವಯಸ್ಕರು ಮಕ್ಕಳ ಮಾತುಗಳನ್ನು ಕೇಳಲು, ಅವರ ಸ್ವಂತ ದೌರ್ಬಲ್ಯಗಳನ್ನು ಗುರುತಿಸಲು ಮತ್ತು ನಮ್ಮ ನಡವಳಿಕೆಗಳು ಮತ್ತು ನಮ್ಮ ವಿಧಾನಗಳು ಮಕ್ಕಳನ್ನು ಹೇಗೆ ದೂರವಿಡುತ್ತವೆ ಎಂಬುದನ್ನು ಗುರುತಿಸಲು ಸಿದ್ಧರಿದ್ದರೆ, ಬಹುಶಃ ನಾವು ಶಾಲೆಯನ್ನು ಸುರಕ್ಷಿತವಾಗಿ ಅಭಿವೃದ್ಧಿಪಡಿಸಲು ಮೊದಲ ಹೆಜ್ಜೆ ಇಡುತ್ತೇವೆ ಮತ್ತು ಎಲ್ಲಾ ಮಕ್ಕಳಿಗೆ ಅದು ಸಂತೋಷದ ಸ್ಥಳವಾಗುತ್ತದೆ.

ಅಡಿ ಟಿಪ್ಪಣಿಗಳು:

i Lalit, R. (2022) The Cultivation of Safe Spaces Within Schools. Available at: https://feminisminindia.com/2022/01/21/the-cultivation-of-safe-spaces-within-schools/

ii The Book Review, November 2022, Pg. 62


iii Bandura A (2017) Toward a psychology of human agency: pathways and reflections. Perspectives on Psychological Science, 13(2):130–136

iv Janelle B. Mathis (2016) Literature and the Young Child: Engagement, Enactment, and Agency from a Sociocultural Perspective, Journal of Research in Childhood Education, Volume 30, 2016 - Issue 4

v Quoted in Reflecting on childhood and child agency in history: Haring, U. et al. (2019) Palgrave Communications | https://doi.org/10.1057/s41599-019-0259-0



ಜ್ಯೋತಿ ದೇಶಮುಖ್ ಅವರು ಕಳೆದ ಒಂಬತ್ತು ವರ್ಷಗಳಿಂದ ಭೋಪಾಲ್ ಮೂಲದ ಲಾಭೋದ್ದೇಶವಿಲ್ಲದ ಸಂಸ್ಥೆ ಮುಸ್ಕಾನ್ನಲ್ಲಿ ತರಗತಿಯ ಸುಗಮಕಾರರಾಗಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳಿಗೆ ಕಲಿಸಲು ಆನಂದಿಸುತ್ತಾರೆ ಮತ್ತು ತರಗತಿಯನ್ನು ಸಕ್ರಿಯವಾಗಿ ಇಡಲು, ಎಲ್ಲರಿಗೂ ಆನಂದದಾಯಕವಾಗಿಸಲು ಹೊಸ ವಿಧಾನಗಳನ್ನು ನಿರಂತರವಾಗಿ ಹುಡುಕುತ್ತಿರುತ್ತಾರೆ. ಅವರನ್ನು jdeshmukh025@gmail.com ಮೂಲಕ ಸಂಪರ್ಕಿಸಬಹುದು.



ಶಿವಾನಿ ತನೇಜಾ ಅವರು 25 ವರ್ಷಗಳಿಂದ ಭೋಪಾಲ್ ಮತ್ತು ಸುತ್ತಮುತ್ತಲಿನ, ಗುರುತಿಸಲ್ಪಟ್ಟ ಬುಡಕಟ್ಟು ಹಿನ್ನೆಲೆಯ ಜನರು ಮತ್ತು ಬಡ ಸಮುದಾಯಗಳ ನಡುವೆ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣವನ್ನು ಪ್ರತ್ಯೇಕವಾದ ಶೈಕ್ಷಣಿಕ ವಿದ್ಯಮಾನವಾಗಿ ನೋಡಲು ಸಾಧ್ಯವಿಲ್ಲ ಮತ್ತು ಶಿಕ್ಷಣತಜ್ಞರಾಗಿ ನಾವು ಮಗುವಿನ ಹಿತ ಮತ್ತು ವಿಮರ್ಶಾತ್ಮಕ ಸಬಲೀಕರಣವನ್ನು ಶೈಕ್ಷಣಿಕ ಪ್ರಯಾಣದ ಕೇಂದ್ರವಾಗಿ ನೋಡಬೇಕಾಗಿದೆ ಎಂದು ನಂಬುತ್ತಾರೆ. ಈ ದೃಷ್ಟಿಕೋನವು ಅವರ ಕಾಳಜಿ ಮತ್ತು ಕೆಲಸದ ಆದ್ಯತೆಗಳಲ್ಲಿ, ಸಾಮಾಜಿಕ ನ್ಯಾಯ ಮತ್ತು ಕಷ್ಟಕರವಾದ ಬಾಲ್ಯದ ನಡುವೆ ಮಕ್ಕಳ ಸಾಮೂಹಿಕ ಕರ್ತೃತ್ವವನ್ನು, ಮಾನಸಿಕ ಆರೋಗ್ಯವನ್ನು ನಿರ್ಮಿಸುವುದರಲ್ಲಿ ಪ್ರತಿಬಿಂಬಿತವಾಗುತ್ತಿದೆ. ಪ್ರಮುಖವಾಗಿ ಶಿಕ್ಷಕಿಯಾಗಿ, ಅವರು ಮುಸ್ಕಾನ್ನಲ್ಲಿ ಪ್ರತಿದಿನವೂ ತರಗತಿಯ ಭಾಗವಾಗಿರುವುದನ್ನು ಮತ್ತು ಶಿಕ್ಷಣಶಾಸ್ತ್ರದ ಮಧ್ಯಸ್ಥಿಕೆಗಳಿಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಗಮನಿಸುವುದನ್ನು ಮತ್ತು ಅದರಿಂದ ಕಲಿಯುವುದನ್ನು ಆನಂದಿಸುತ್ತಾರೆ. ಅವರನ್ನು shivani@muskaan.org ಮೂಲಕ ಸಂಪರ್ಕಿಸಬಹುದು.

ಅನುವಾದ: **ನಿವೇದಿತಾ ಬಿ. ರುದ್ರೇಶ್** | ಪರಿಶೀಲನೆ: **ನಾಗಮಣಿ ಎಸ್. ಎನ್.**